# ECCE ಗೆ ಗುಣಮಟ್ಟದ ಮಾನದಂಡಗಳು

## 1.2 ಪ್ರಸ್ತುತ ಪರಿಸ್ಥಿತಿ

ಪ್ರಸ್ತುತ, ಇತರ ಹಲವು ದೇಶಗಳಲ್ಲಿರುವಂತೆ ಭಾರತದಲ್ಲಿಯೂ, ECCE ಗೆ ಲಭ್ಯವಿರುವ ಕಾರ್ಯಕ್ರಮಗಳ ಸ್ವರೂಪದಲ್ಲಿ ಹೆಚ್ಚಿನ ವೈವಿಧ್ಯತೆ ಇದೆ. ಈ ಕ್ಷೇತ್ರದಲ್ಲಿ ತೊಡಗಿಕೊಳ್ಳುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ; ಸೇವಾ ಪೂರೈಕೆದಾರರ ಈ ಬಹುಸಂಖ್ಯೆಯು ECCE ಯ ವೈವಿಧ್ಯಮಯ ಮಾದರಿಗಳು ಕ್ಷೇತ್ರಕ್ಕೆ ಪ್ರವೇಶಿಸಲು ಕಾರಣವಾಗಿದ್ದು, ಅನೇಕವೇಳೆ ಆ ಮಾದರಿಗಳ ಸಾಂಸ್ಕೃತಿಕ ಮತ್ತು ಸಂದರ್ಭೋಚಿತ ಪ್ರಸ್ತುತತೆಯನ್ನು ಸಹ ಪರಿಶೀಲಿಸದೆಯೇ ಬಹುಸಂಖ್ಯೆಯ ಬಾಲ್ಯ ಮತ್ತು ಶಿಕ್ಷಣದ ತತ್ವಶಾಸ್ತ್ರಗಳನ್ನು ತಮ್ಮೊಂದಿಗೆ ತಂದಿವೆ. ಆದಾಗ್ಯೂ, ಓರ್ವ ವ್ಯಕ್ತಿಯು ECCE ಕ್ಷೇತ್ರವನ್ನು ಪ್ರವೇಶಿಸಲು ಯಾವುದೇ ನಿರ್ದಿಷ್ಟ ಅರ್ಹತೆಯ ಅಗತ್ಯವಿಲ್ಲ ಹಾಗೂ ಒದಗಿಸಲಾಗುವ ECCE ಸೇವೆಗಳು ಸರಿಯಾದ ಗುಣಮಟ್ಟದ್ದಾಗಿವೆ ಮತ್ತು ಚಿಕ್ಕ ಮಕ್ಕಳ ಹಿತಾಸಕ್ತಿಗಳನ್ನು ಉತ್ತಮವಾಗಿ ಪೂರೈಸುತ್ತಿವೆಯೇ ಎಂದು ಖಚಿತಪಡಿಸಿಕೊಳ್ಳುವ ಮಾರ್ಗಸೂಚಿಗಳನ್ನು ನಿಗದಿಪಡಿಸಲು ಯಾವುದೇ ಪ್ರಯತ್ನಗಳು ನಡೆದಿಲ್ಲ. ಕೆಲವೊಮ್ಮೆ, ಈ ECCE ನಿಬಂಧನೆಗಳು ಚಿಕ್ಕ ಮಗುವಿಗೆ ಪ್ರಯೋಜನಕಾರಿಯಾಗುವುದಕ್ಕಿಂತ ಹೆಚ್ಚಾಗಿ ಹಾನಿಕಾರಕವೇ ಆಗಿವೆ.

ಆದ್ದರಿಂದ, ತಾರ್ಕಿಕ ಅನುಸಿದ್ಧಾಂತವಾಗಿ, ದೇಶದಾದ್ಯಂತ ಚಿಕ್ಕ ಮಕ್ಕಳಿಗಾಗಿ ಲಭ್ಯವಿರುವ ಎಲ್ಲಾ ಕಾರ್ಯಕ್ರಮಗಳು ಮತ್ತು ನಿಬಂಧನೆಗಳಾದ್ಯಂತ ಸುಧಾರಿತ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ECCE ಗೆ ಕೆಲವು ಸ್ವೀಕಾರಾರ್ಹ ಮಾನದಂಡಗಳನ್ನು ನಿಗದಿಪಡಿಸಬೇಕಾಗಿದೆ.

## 1.3 ಉದ್ದೇಶ

ಪ್ರಮಾಣಗಳು ಮತ್ತು ಮಾನದಂಡಗಳು ಈ ಕೆಳಗಿನ ಕಾರಣಗಳಿಗಾಗಿ ಮುಖ್ಯವೆನಿಸುತ್ತವೆ:

- ಕ್ಷೇತ್ರದಲ್ಲಿ ವೃತ್ತಿಪರತೆಯನ್ನು ಉತ್ತೇಜಿಸಲು

- ಎಲ್ಲಾ ಚಿಕ್ಕ ಮಕ್ಕಳಿಗೆ ಗುಣಮಟ್ಟದ ಸೇವೆಗಳನ್ನು ಉತ್ತೇಜಿಸಲು, ಬಲಪಡಿಸಲು ಮತ್ತು ಉಳಿಸಿಕೊಳ್ಳಲು
- ಈ ಕ್ಷೇತ್ರದ ವ್ಯವಸ್ಥಿತ ಅಭಿವೃದ್ಧಿಗಾಗಿ

ಗುಣಮಟ್ಟದ ಚೌಕಟ್ಟಿನ ಉದ್ದೇಶವು ಮಕ್ಕಳಿಗೆ ಅತ್ಯುತ್ತಮವಾದ ಬೆಳವಣಿಗೆಯ ಅವಕಾಶಗಳನ್ನು ಖಚಿತಪಡಿಸಿಕೊಳ್ಳಲು ತಿಳಿದಿರುವ ಪ್ರಮುಖ ಕ್ಷೇತ್ರಗಳಿಗೆ ನಿರ್ದೇಶನವನ್ನು ಒದಗಿಸುವುದಾಗಿದೆ. ಇದು ಗುಣಮಟ್ಟವನ್ನು ಸಾಧಿಸಿ ಉಳಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಸೂಕ್ತವಾದ ಬೆಂಬಲ ನೀಡುವ ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸುವುದನ್ನು ಕೂಡ ಒಳಗೊಂಡಿರುತ್ತದೆ.

## 1.4 ಆಧಾರವಾಗಿರುವ ತತ್ವಗಳು

ಈ ದಾಖಲೆಯಲ್ಲಿ ನಮೂದಿಸಲಾಗಿರುವ ಗುಣಮಟ್ಟದ ಮಾನದಂಡಗಳಿಗೆ ಕೆಳಗಿನ ತತ್ವಗಳು ಮೂಲಾಧಾರಗಳಾಗಿವೆ:

- **ಬೆಳವಣಿಗೆಗೆ / ವಯೋ ಸೂಕ್ತವಾದ ಸೇವೆಗಳು:**
  0-8 ವರ್ಷ ವಯಸ್ಸಿನ ಮಕ್ಕಳಿಗೆ ಸೇವೆಗಳು ಮತ್ತು ಕಾರ್ಯಕ್ರಮಗಳನ್ನು ಬೆಳವಣಿಗೆಗೆ ಸೂಕ್ತವಾದ ಸಾಮರ್ಥ್ಯಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಬೇಕು. ಉದಾಹರಣೆಗೆ, ಬೆಳವಣಿಗೆ ಹೊಂದುವ ಕ್ಷೇತ್ರಗಳು, ಮೈಲಿಗಲ್ಲುಗಳು ಮತ್ತು ಮಗುವಿನ ಅಗತ್ಯತೆಗಳು.

- **ಮಕ್ಕಳ ಸಮಗ್ರ ಬೆಳವಣಿಗೆಯನ್ನು ಖಾತ್ರಿಪಡಿಸುವುದು:**
  ECCE ಕಾರ್ಯಕ್ರಮಗಳಲ್ಲಿ ಬಳಸಲಾಗುವ ಬೋಧನಾ ವಿಧಾನಗಳು, ವಿಶೇಷ (ಅಗತ್ಯಗಳಿರುವ) ಮಕ್ಕಳ ಅಗತ್ಯತೆಗಳನ್ನು ಸಹ ಗಮನದಲ್ಲಿಟ್ಟುಕೊಂಡು, ಚಿಕ್ಕ ಮಗುವಿನ ಸಮಗ್ರ ಬೆಳವಣಿಗೆಗೆ ಒತ್ತು ನೀಡಬೇಕು. ಆರೈಕೆ ಮತ್ತು ಶಿಕ್ಷಣ ಎರಡೂ ಮುಖ್ಯ, ಮತ್ತು ಅವುಗಳ ನಡುವಿನ ಸಂಬಂಧಗಳನ್ನು ಅನ್ವೇಷಿಸಬೇಕು ಮತ್ತು ಬಳಸಿಕೊಳ್ಳಬೇಕು. ಬೆಳವಣಿಗೆಯ ಕ್ಷೇತ್ರಗಳು ಒಂದಕ್ಕೊಂದು ಪ್ರತ್ಯೇಕವಾಗಿಲ್ಲದ ಕಾರಣ ಕ್ಷೇತ್ರಗಳಾದ್ಯಂತ ಅಂತರ-ಸಂಬಂಧಗಳನ್ನು ಸಹ ಪರಿಗಣಿಸಬೇಕು.

- **ಮಗುವಿನ ಸಂದರ್ಭಕ್ಕೆ ಪ್ರಸ್ತುತವಾಗಿರಬೇಕು:**

ಮಗುವಿನ ಕಲಿಕೆಯು ಅವಳ/ಅವನ ಸಂದರ್ಭಕ್ಕೆ ಪ್ರಸ್ತುತವಾಗಿದೆ ಎನ್ನುವುದನ್ನು ECCE ಯಲ್ಲಿ ಬಳಸುವ ಬೋಧನಾ ವಿಧಾನವು ಪ್ರತಿಫಲಿಸಬೇಕು. ಮಗುವಿನ ಸಂದರ್ಭ ಮತ್ತು ಕುಟುಂಬದ ಸಾಮಾಜಿಕ ಹಿನ್ನೆಲೆಯ ತಿಳುವಳಿಕೆಯನ್ನು ಆಧರಿಸಿ ಅಂತರಕ್ರಿಯೆಗಳನ್ನು ನಡೆಸಬೇಕು.

- **ಕುಟುಂಬ ಮತ್ತು ಸಮುದಾಯದೊಂದಿಗೆ ಸಹಭಾಗಿತ್ವ:**

ಕುಟುಂಬವು ಎಲ್ಲಾ ಮಕ್ಕಳ ಕಲಿಕೆ ಮತ್ತು ಬೆಳವಣಿಗೆಯ ಆರಂಭಕ್ಕೆ ಮೊದಲ ಸಂದರ್ಭವಾಗಿ ಇರುತ್ತದೆ ಎಂದು ಗುರುತಿಸುವುದು ಮುಖ್ಯವಾಗಿದೆ. ECCEಯ ಕಾರ್ಯಕ್ರಮಗಳು ಮತ್ತು ಸೇವೆಗಳನ್ನು ತಲುಪಿಸುವುಲ್ಲಿ ಕುಟುಂಬ ಮತ್ತು ಪೋಷಕರ ಪಾತ್ರವು ಅತ್ಯಂತ ಪ್ರಮುಖವಾದದ್ದಾಗಿದೆ. ಕುಟುಂಬ ಮತ್ತು ಪೋಷಕರೊಂದಿಗಿನ ಸಕಾರಾತ್ಮಕ ಸಂಬಂಧಗಳೊಂದಿಗೆ ಸಾಮರಸ್ಯದ ಸಂಬಂಧವು ಮಗುವಿನ ಅತ್ಯುತ್ತಮ ಬೆಳವಣಿಗೆಗಾಗಿ ಅದರ ಹಿತಾಸಕ್ತಿಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದನ್ನು ಖಚಿತಪಡಿಸುತ್ತದೆ.

- **ಮಗುವಿನ ಕಲಿಕೆಗೆ ಪರಿಸರದ ಪಾತ್ರ ಮಹತ್ವವಾದದ್ದು:**

ಕಲಿಕೆಯಲ್ಲಿ ಮಗುವು ಸಕ್ರಿಯ ಕರ್ತೃ ಆಗಿರುತ್ತದೆ ಮತ್ತು ಅವನ/ಅವಳ ಸಂಪೂರ್ಣ ಸಾಮರ್ಥ್ಯವನ್ನು ಬೆಳಸಿಕೊಳ್ಳಲು ಅವನಿಗೆ/ಅವಳಿಗೆ ಅನುವು ಮಾಡಿಕೊಡುವ ಸಲುವಾಗಿ ಇದನ್ನು ಉತ್ತೇಜಿಸಬೇಕು ಮತ್ತು ಸುಗಮಗೊಳಿಸಬೇಕು. ಮಗುವಿಗೆ ಆಯ್ಕೆಗಳನ್ನು ಮಾಡಿಕೊಳ್ಳಲು, ಅನ್ವೇಷಿಸಲು ಮತ್ತು ಪ್ರಯೋಗ ಮಾಡಲು ಸ್ವಾತಂತ್ರ ನೀಡಬೇಕು, ಮತ್ತು ಇದಕ್ಕಾಗಿ ಮಗುವಿನ ಸುತ್ತಮುತ್ತಲಲ್ಲಿ ಅಂತಹ ಅವಕಾಶಗಳನ್ನು ಒದಗಿಸಬೇಕು. ವೃತ್ತಿಗಾರರು, ಸಂಶೋಧಕರು, ಶಿಕ್ಷಕರು, ವೃತ್ತಿಪರರು ಮತ್ತು ವಿವಿಧ ಪಾಲುದಾರರು, ವಿಶೇಷ (ಅಗತ್ಯಗಳಿರುವ) ಮಕ್ಕಳನ್ನೂ ಸೇರಿದಂತೆ, ಮಕ್ಕಳ ಆಸಕ್ತಿಗಳನ್ನು ಪೂರೈಸುತ್ತಿದ್ದಾರೆ ಎಂದು ಖಚಿತಪಡಿಸಿಕೊಳ್ಳಲು ಅವರ ಅಭಿಪ್ರಾಯಗಳನ್ನು ಆಲಿಸಬೇಕು.

- **ಸಮತೆ, ಒಳಗೂಡಿಸುವಿಕೆ, ವೈವಿಧ್ಯತೆ:**

ಗುಣಮಟ್ಟದ ECCE ಕಾರ್ಯಕ್ರಮಗಳು ಎಲ್ಲಾ ರೀತಿಯ - ಸಾಂಸ್ಕೃತಿಕ, ಭಾಷಿಕ, ಜಾತಿ, ಲಿಂಗ, ವರ್ಗ, ದೌರ್ಬಲ್ಯ, ಇತ್ಯಾದಿ - ವೈವಿಧ್ಯತೆಗಳಿಗೆ ಪ್ರಾಮುಖ್ಯತೆ ನೀಡಬೇಕು ಮತ್ತು ಗೌರವಿಸಬೇಕು. ಗುಣಮಟ್ಟದ ಕಾರ್ಯಕ್ರಮಗಳು ವಿವಿಧ ಭಾರತೀಯ

ಸಾಂಸ್ಕೃತಿಕ ಪರಂಪರೆಯಿಂದ ಬಂದಂತಹ ಮಕ್ಕಳಲ್ಲಿ - ಅವರು ಉನ್ನತ ಸಾಮಾಜಿಕ-ಆರ್ಥಿಕ ಸ್ತರಗಳಿಂದಾಗಲಿ ಅಥವಾ ಕಡಮೆ ಆರ್ಥಿಕ ಸ್ತರಗಳಿಂದಾಗಲಿ, ಸಾಮರ್ಥ್ಯವುಳ್ಳ ಗುಂಪಿನಿಂದಾಗಲಿ ಅಥವಾ ಅಸಾಮರ್ಥ್ಯವುಳ್ಳ ಗುಂಪಿನಿಂದಾಗಲಿ ಬಂದಿರಿಲಿ - ತಾವೆಲ್ಲರೂ ಒಂದೇ ಮಾನವ ಕುಲಕ್ಕೆ ಸೇರಿದವರು ಎಂಬ ಭಾವನೆಯನ್ನು ಉತ್ತೇಜಿಸಬೇಕು. ಕಾರ್ಯಕ್ರಮಗಳು ವೈವಿಧ್ಯಮಯವಾದ ಶ್ರೀಮಂತಿಕೆಯ ಮತ್ತು ವೈವಿಧ್ಯವುಳ್ಳ ಅನುಭವಗಳನ್ನು ಪರಿಚಯಿಸುವ ಮೂಲಕ ವೈವಿಧ್ಯತೆಯನ್ನು ಅಳವಡಿಸಿಕೊಳ್ಳಬೇಕು, ಹೀಗೆ ಮಕ್ಕಳಿಗೆ ವೈವಿಧ್ಯತೆಯನ್ನು ಮೌಲ್ಯಯುತವೆಂದು ಕಾಣಲು ಮತ್ತು ಗೌರವಿಸಲು ಅವಕಾಶ ನೀಡುತ್ತದೆ.

ಗುಣಮಟ್ಟ ಮಾನದಂಡಗಳ ವಿಧಾನವು ಗುಣಮಟ್ಟವು ಬಹುಮುಖಿ ಪರಿಕಲ್ಪನೆಯಾಗಿದ್ದು, ಅದರ ವರ್ಧನೆಯನ್ನು ಕ್ರಿಯಾತ್ಮಕ ಮತ್ತು ನಿರಂತರ ಪ್ರಕ್ರಿಯೆಯಾಗಿ ನೋಡಬೇಕೇ ವಿನಾ ಅದರದ್ದೇ ಆದ ಕಾರಣಕ್ಕೆ ಸೀಮಿತವಾಗಿಸಬಾರದು ಎಂಬ ತತ್ವದಿಂದ ಅರಿಯಲಾಗಿದೆ. ಇಲ್ಲಿ ಸಂಸ್ಥೆಗಳು ಗುಣಮಟ್ಟದ ಸುಧಾರಣೆಗೆ ಸಂಚಿತ ವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ ಅತ್ಯುತ್ತಮ ಸ್ಥಿತಿಯ ಕಡೆಗೆ ಚಲಿಸುತ್ತವೆ. ಇದು ಚಿಕ್ಕ ಮಗುವಿನ ಅಗತ್ಯಗಳನ್ನು ಪೂರೈಸುವ ರೀತಿಯಲ್ಲಿ, ಕೇಂದ್ರಗಳು ನೀಡುವ ಸೇವೆಗಳಲ್ಲಿ ನಿರಂತರ ಸುಧಾರಣೆಗೆ ಕಾರಣವಾಗುತ್ತದೆ. ಇದು ಸಮಾನ ಗುಣಮಟ್ಟವನ್ನು ಉತ್ತೇಜಿಸುವ ಒಂದು ಸಾಧನವಾಗಿದೆ. ಅಗತ್ಯ ಮಾನದಂಡಗಳನ್ನು ಶ್ರೇಣೀಕೃತ ಮತ್ತು ಮೌಲ್ಯಭರಿತ ರೂಪದಲ್ಲಿ ಜಾರಿಗೆ ತರುವುದನ್ನು ಒಳಗೊಳ್ಳುವ ಶ್ರೇಣೀಕೃತ ವಿಧಾನವೊಂದನ್ನು ಅಳವಡಿಸಿಕೊಳ್ಳಲಾಗುತ್ತದೆ.

## 1.5 ವ್ಯವಸ್ಥಿತ ಆವಶ್ಯಕತೆ

**‘ಗುಣಮಟ್ಟದ ಮಾನದಂಡಗಳು’ ಒಂದು ಸ್ವತಂತ್ರ ಪ್ರಯೋಗವಲ್ಲ. ಇದು ರಾಷ್ಟ್ರೀಯ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ECCE) ನೀತಿ (National Early Childhood Care and Education (ECCE) Policy); ಆರಂಭಿಕ ಬಾಲ್ಯ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನ (National Curriculum Framework for Early Childhood Education)ಸಂಯೋಜನೆಯ ಪ್ರಾರಂಭದೊಂದಿಗೆ ಕಾರ್ಯಸಾಧುಗೊಳಿಸುವ ಪರಿಸರದಿಂದ ಬೆಂಬಲಿತವಾಗಿದೆ. ಇದಕ್ಕೆ ಸರಿಹೊಂದುವ**

**ಬೆಂಬಲಿತ ಮೇಲ್ವಿಚಾರಣೆಯ ವ್ಯವಸ್ಥೆಯೊಂದು ಸಹ ಅಗತ್ಯವಿರುತ್ತದೆ; ECCE ಸಿಬ್ಬಂದಿಗೆ ಶಿಕ್ಷಕರ ಶಿಕ್ಷಣದ ಚೌಕಟ್ಟು ಮತ್ತು ವೃತ್ತಿಪರ ಬೆಂಬಲದ ಅಗತ್ಯವಿರುತ್ತದೆ.**

ಮಾನದಂಡಗಳ ಗುಣಮಟ್ಟದ ವ್ಯವಸ್ಥೆಗಳು ಮತ್ತು ಪ್ರಕ್ರಿಯೆಯನ್ನು ರಾಷ್ಟ್ರೀಯ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ECCE) ಪರಿಷತ್ತಿನ (National Early Childhood Care and Education (ECCE) Council) ಅಡಿಯಲ್ಲಿ ಸ್ಥಾಪಿಸಲಾಗುವುದು. ರಾಷ್ಟ್ರೀಯ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ECCE) ಪರಿಷತ್ತು 'ಗುಣಮಟ್ಟದ ECCE' ಯ ರೂಪುರೇಖೆಯನ್ನು ವಿಶದೀಕರಿಸಿ ಉತ್ತೇಜಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುವುದು. ಇದು ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಅಡಿಯಲ್ಲಿನ ರಾಷ್ಟ್ರೀಯ ಸಂಸ್ಥೆಯಾಗಿದ್ದು, ಉನ್ನತ ಕಲಿಕಾ ಸಂಸ್ಥೆಗಳಂತಹ ಮಕ್ಕಳ ಅಭಿವೃದ್ಧಿ ಕ್ಷೇತ್ರದಲ್ಲಿನ ಹಲವಾರು ಕ್ಷೇತ್ರಗಳಾದ್ಯಂತ ಸದಸ್ಯರನ್ನು; ಉತ್ತಮ ಕಾರ್ಯರೀತಿಗಳನ್ನು ಸ್ಥಾಪಿಸಲು ಮತ್ತು ಸ್ಥಿರವಾದ ಉನ್ನತ ಗುಣಮಟ್ಟದ ಸೇವೆಯನ್ನು ನೀಡುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಪ್ರಮುಖ ಚಟುವಟಿಕೆಗಳನ್ನು ಕೈಗೊಳ್ಳಲು ವೃತ್ತಿಪರರು ಮತ್ತು ನಾಗರಿಕ ಸಮಾಜದ ಸದಸ್ಯರನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ರಾಷ್ಟ್ರೀಯ ECCE ನೀತಿಯ ಅನುಷ್ಠಾನಕ್ಕೆ ಮಾರ್ಗದರ್ಶನ ನೀಡಲು ಮತ್ತು ಮೇಲ್ವಿಚಾರಣೆ ಮಾಡಲು ಹಾಗೂ ರಾಷ್ಟ್ರೀಯ ECCE ನೀತಿ/ ಕಾನೂನುಗಳು ಇತ್ಯಾದಿಗಳಿಗೆ ಅನುಗುಣವಾಗಿ ECCE ಕಾರ್ಯಕ್ರಮಗಳಿಗೆ ಸಲಹೆ ಮತ್ತು ಮಾರ್ಗದರ್ಶನ ನೀಡಲು ಪರಿಷತ್ತು ಅಗ್ರಮಾನ್ಯ ಸಂಸ್ಥೆ (apex body) ಆಗಿರುತ್ತದೆ. ಕೇಂದ್ರಗಳ ಬಾಹ್ಯ ಮೌಲ್ಯಮಾಪನಕ್ಕೆ ಪರಿಷತ್ತು ಜವಾಬ್ದಾರಿ ಹೊಂದಿರುತ್ತದೆ. ಅನುಮೋದನೆ, ನಿಯತಕಾಲಿಕ ಪರಿಶೀಲನೆ ಮತ್ತು ಮೇಲ್ವಿಚಾರಣೆಗಾಗಿ ಔಪಚಾರಿಕ ಕಾರ್ಯವಿಧಾನಗಳನ್ನು ಪರಿಷತ್ತಿನ ಅಡಿಯಲ್ಲಿ ಸ್ಥಾಪಿಸಲಾಗುವುದು. ಪರಿಷತ್ತು ಗುಣಮಟ್ಟದ ಸಲಹೆಗಾರರು ಮತ್ತು ಮಾನ್ಯತೆದಾರರಾಗಲು ಸೂಕ್ತರಾದ ಅರ್ಹ ಮತ್ತು ಅನುಭವಿ ವ್ಯಕ್ತಿಗಳನ್ನು ಗುರುತಿಸಿ, ತರಬೇತಿ ನೀಡುತ್ತದೆ. ECCE ಪೂರೈಕೆದಾರು ಪಾಲಿಸಬೇಕಾದ ಗುಣಮಟ್ಟದ ಮಾನದಂಡಗಳನ್ನು ಅನುಸರಣೆ ಮಾಡುವುದನ್ನು ಪ್ರೋತ್ಸಾಹಿಸಲು ಚಿಂತನಶೀಲ ವೃತ್ತಿಪರರನ್ನು ಒಳಗೊಂಡ ಒಂದು ಬೆಂಬಲ ನೀಡುವ ಚೌಕಟ್ಟನ್ನು ರೂಪಿಸಲಾಗುವುದು.

## 1.6 ದತ್ತಮಾಹಿತಿಗಳು ಮತ್ತು ಪ್ರಕ್ರಿಯೆಯ ನಿರ್ದಿಷ್ಟ ವಿವರಣೆಗಳು

ಈ ಇಡೀ ಪ್ರಕ್ರಿಯೆಯು ಮೂರು ಉಪ-ಪ್ರಕ್ರಿಯೆಗಳನ್ನು ಒಳಗೊಂಡಿದೆ. ಅವುಗಳೆಂದರೆ, ಗುಣಮಟ್ಟದ ಸಂರಚನೆ, ಗುಣಮಟ್ಟದ ಮೌಲ್ಯಮಾಪನ, ಮತ್ತು ಗುಣಮಟ್ಟದ ಸುಧಾರಣಾ ಪ್ರಕ್ರಿಯೆ.

**ಅನುವಾದಕರು:** **/ ಪರಿಶೀಲಕರು:**
**ಮೂಲ:**